# ಅಜ್ಜಿ ನನ್ನನ್ನು ಟಿವಿಯಲ್ಲಿ ನೋಡಬೇಕಿತ್ತು



**ಐಶ್ವರ್ಯ**
ಝೀ ಕನ್ನಡದ ಯಾರೇ ನೀನು ಮೋಹಿನಿಯ 'ಮಾಯಾ'

★ ***'...ಮೋಹಿನಿ' ಹೇಗೆ ಭಿನ್ನ ಎನ್ನಿಸುತ್ತಾಳೆ?***

ತರ್ಕಬದ್ಧವಾಗಿ ಇಲ್ಲಿ ಕತೆಯನ್ನು ನಿರೂಪಣೆ ಮಾಡಿದ್ದಾರೆ. ಅದ್ದೂರಿ ಗ್ರಾಫಿಕ್ ಮಾಡಿರುವುದು ಧಾರಾವಾಹಿಯ ವೀಕ್ಷಕರಿಗೂ ಖುಷಿ ಎನಿಸುವಂತಿದೆ. ಕಥಾನಾಯಕನ ಹೆಂಡತಿ ನಿಧನ ಹೊಂದಿ ಮೋಹಿನಿ ಆಗಿದ್ದಾಳೆ. ಈಗ ಬೆಳ್ಳಿ ತನ್ನ ಸೋದರ ಮಾವನಾದ ಕಥಾನಾಯಕನನ್ನು ಮದುವೆ ಆಗಬೇಕು. ಮೋಹಿನಿ ಅದಕ್ಕೆ ಸಹಾಯ ಮಾಡುತ್ತಿದ್ದಾಳೆ. ನಾಯಕನ ಮಲತಾಯಿ 'ನೀಲಾಂಬರಿ'ಗೆ ಅದನ್ನು ತಪ್ಪಿಸಿ ನನ್ನನ್ನು ತಮ್ಮ ಮನೆ ಸೊಸೆ ಮಾಡಿಕೊಳ್ಳಬೇಕು ಎನ್ನುವ ಬಯಕೆ. ಇದಕ್ಕೆಲ್ಲಾ ಆಸ್ತಿಯ ಒಡೆತನದ ಹಪಾಹಪಿ. ನಮ್ಮ ಉದ್ದೇಶ ಯಾರಿಗೂ ಗೊತ್ತಾಗದಂತೆ, ಒಳ್ಳೆಯ ಜನರಂತೆ ಕಾಣಿಸಿಕೊಳ್ಳಬೇಕು. ನಮ್ಮ ಕಾರ್ಯ ಸಾಧನೆಗೆ ನಾಜೂಕಿನ ಕುತಂತ್ರಗಳನ್ನು ಹೆಣೆಯುತ್ತಲೇ ಇರಬೇಕಾಗುತ್ತದೆ. ಒಟ್ಟಾರೆ ಸುಂದರ ಕಥೆಯೊಂದಕ್ಕೆ ವಿಲನ್ ಆಗಿರುವುದು ನನಗೆ ಇಷ್ಟ ಆಗಿದೆ.

★ ***ನಾಯಕಿ ಆದವಳು ಖಳನಾಯಕಿ ಆದರೆ ಕಿರಿಕಿರಿ ಆಗುವುದಿಲ್ಲವೆ?***

ಇದು ನನ್ನ ಎರಡನೇ ಧಾರಾವಾಹಿ. ಮೊದಲಿಗೆ 'ಮಹಾಸತಿ'ಯಲ್ಲಿ ನಾಯಕಿಯಾಗಿ ಸದ್ಗುಣ ಸಂಪನ್ನೆಯಂತೆ ಕಾಣಿಸಿಕೊಂಡಿದ್ದೆ. ಈಗ ಅದಕ್ಕೆ ವಿರುದ್ಧವಾದ ಸ್ವಭಾವ. ಇದು ಒಳ್ಳೆಯ ಪಾತ್ರ ಮಾತ್ರವಲ್ಲ, ತುಂಬಾ ಸವಾಲಿನ ಪಾತ್ರವೂ ಹೌದು. ದಿನಕ್ಕೊಂದು ಹೊಸ ತಂತ್ರ, ಪ್ರತಿತಂತ್ರ, ಕುತಂತ್ರ ಹೆಣೆಯಬೇಕು. ಸತ್ಯ– ಅಸತ್ಯಗಳನ್ನು ಬದಲಿಸಬೇಕು. ಎಲ್ಲದಕ್ಕಿಂತ ಹೆಚ್ಚಾಗಿ ತುಂಬಾ ಮಾಡರ್ನ್ ಹುಡುಗಿ. ಲಕ್ಸುರಿ ಆಭರಣ– ವೈಭವದ ಉಡುಗೆಯಿದೆ. ಪಾತ್ರ ಒಂದು ರೀತಿಯಲ್ಲಿ ಟ್ರೇಡ್ ಮಾರ್ಕ್‌ನಂತೆ ಟ್ರೆಂಡ್ ನಿರ್ಮಿಸುವಂತೆ ಕಾಣಿಸುತ್ತದೆ. ನಾಯಕಿ– ಖಳನಾಯಕಿ ಎನ್ನುವುದಕ್ಕಿಂತ ಪಾತ್ರ ಭರ್ಜರಿಯಾಗಿದೆ. ಜನ ಗುರುತಿಸುವಂತಿದೆ. ಇದು ಹೆಮ್ಮೆಯನ್ನು ಮೂಡಿಸಿದೆಯೇ ಹೊರತು ಕಿರಿಕಿರಿಯನ್ನಲ್ಲ.

★ ***ನಟಿಯಾಗಿದ್ದು ಹೇಗೆ?***

ಮನಃಶಾಸ್ತ್ರದಲ್ಲಿ ಸಂಶೋಧನೆ ಮಾಡಿ, ಆಪ್ತಸಮಾಲೋಚಕಿ ಆಗಬೇಕಿತ್ತು. ಮಧ್ಯದಲ್ಲಿಯೇ ಬದುಕು ಬೇರೆಯ ಮಾರ್ಗ ಹಿಡಿಯಿತು. ಬಿಎ ಓದುವಾಗಲೇ ಫ್ಯಾಷನ್ ಶೋ ನೀಡುತ್ತಿದ್ದೆ. 2015ರಲ್ಲಿ ಬೆಂಗಳೂರಿನಲ್ಲಿ ನಡೆದ ದಕ್ಷಿಣ ಭಾರತ ಫ್ಯಾಷನ್ ಶೋನಲ್ಲಿ 'ಮಿಸ್ ಸೌಂತ್ ಇಂಡಿಯಾ' ಸೇರಿದಂತೆ 'ಮಿಸ್ ಕರ್ನಾಟಕ' 'ಮಿಸ್ ಕ್ವೀನ್'ನಲ್ಲಿ ಮೊದಲ ರನ್ನರ್ ಅಪ್ ಕೂಡ ಆಗಿದ್ದೆ. ಅದು ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರವೂ ಆಯಿತು. ನನ್ನ ಫೋಟೋ ಒಂದನ್ನು ನೋಡಿ ಸುನಿಲ್ ಪುರಾಣಿಕ್ ಸಂಪರ್ಕಿಸಿದರು. ಅವರ ಮಹಾಸತಿಗೆ ಆಯ್ಕೆಯಾದೆ. ನಟನೆ ಬಗ್ಗೆ ತಿಳಿವಳಿಕೆಯೇ ನನ್ನಲ್ಲಿ ಇರಲಿಲ್ಲ. ಆ ಬಗ್ಗೆ ಅರಿವನ್ನು ನೀಡುವ ಜೊತೆಗೆ ನನ್ನಲ್ಲಿ ಅಭಿನಯದ ಅಭಿಲಾಷೆಯನ್ನು ಮೂಡಿಸಿದರು. ಈಗಲೂ ಅವರೇ ನನಗೆ ವೃತ್ತಿ ಮಾರ್ಗದರ್ಶಕರು.

★ ***ನಿಮ್ಮ ಕುಟುಂಬದ ಬೆಂಬಲ ಹೇಗಿದೆ ಹೇಳಿ?***

ನನ್ನ ಅಮ್ಮ ಶೋಭಾ ಟಿ.ಎಚ್.ಎಂ. ದಾವಣಗೆರೆ ಮೂಲದವರು. ಹುಬ್ಬಳ್ಳಿಯಲ್ಲಿ ಬೆಳೆದರು. ಅಪ್ಪ ಮಲ್ಲಿಕಾರ್ಜುನ್ ಬಸ್ವರೆ ಮಹಾರಾಷ್ಟ್ರ ಮೂಲ. ಬೆಳೆದಿದ್ದು ಕಲಬುರ್ಗಿಯಲ್ಲಿ. ವೃತ್ತಿಯಿಂದ ಎನ್‌ಜಿಓ ನಿರ್ದೇಶಕರಾಗಿದ್ದಾರೆ. ಡಾ.ಸುಶೀಲಮ್ಮ ಅಂತ ನನಗೆ ಅಜ್ಜಿ ಇದ್ದಾರೆ. ವೈದ್ಯ ವೃತ್ತಿಯಿಂದ ನಿವೃತ್ತರಾಗಿದ್ದಾರೆ. ಟಿವಿಯನ್ನು ಹೆಚ್ಚಾಗಿ ನೋಡುತ್ತಾರೆ. ನನ್ನನ್ನು ಟಿವಿಯಲ್ಲಿ ನೋಡಬೇಕು ಎನ್ನುವ ಅಭಿಲಾಷೆ ಕೂಡ ಅವರದಾಗಿತ್ತು. ಮಹಾಸತಿಗೆ ಅವಕಾಶ ಸಿಕ್ಕಿದೆ ಎಂದು ಗೊತ್ತಾದ ತಕ್ಷಣ ಅವಕಾಶ ಒಪ್ಪುವಂತೆ ಹುರಿದುಂಬಿಸಿದರು. ಅದು ಕೂಡ ನಟಿಯಾಗಲು ಕಾರಣವಾಯಿತು.

★ ***ನಿಮ್ಮ ನಿರೀಕ್ಷೆಯ ಪಾತ್ರಗಳ ಬಗ್ಗೆ ಹೇಳಿ..***

ನಟನೆ ಹೊಸತನದ ಕೆಲಸ. ದಿನವಿಡಿ ದುಡಿದರೂ ಬೇಸರ ಅನ್ನಿಸುವುದಿಲ್ಲ. ಮನಃಶಾಸ್ತ್ರದ ಹಿನ್ನೆಲೆಯ, ಸಸ್ಪೆನ್ಸ್ ಪಾತ್ರಗಳನ್ನು ಮಾಡಬೇಕು. ಕಾಮಿಡಿ ಪಾತ್ರಗಳಿಗೆ ಹೆಚ್ಚು ಮನ್ನಣೆ ಸಿಗುತ್ತದೆ. ಯಾವುದೇ ಪಾತ್ರವನ್ನು ನಿರ್ವಹಿಸಲು ಸಿದ್ಧ. ಆದರೆ ಪಾತ್ರಕ್ಕೆ ಕಥೆಯಲ್ಲಿ ಪ್ರಾಮುಖ್ಯ ಇರಬೇಕು. ಏನೇ ಆದರೂ ನಟಿಯಾಗಿಯೇ ಬೆಳೆಯುತ್ತೇನೆ.

■ **ರಾಘವೇಂದ್ರ**